# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಚನ್ನರಾಯಪಟ್ಟಣ

## ಸಿ.ಸಿ.ನಂ.120/2025

ಪಿರ್ಯಾದುದಾರರು :- -ವಿರುದ್ಧ - ಆರೋಪಿತರು :-

ಹೆಚ್.ಎಸ್.ವಿಶಾಲಾಕ್ಷಿ ಉಷಾ

## ಭಾರತ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿ ಆರೋಪಿ ಹೇಳಿಕೆ

**ಪ್ರಶ್ನೆ 1** : ಈ ಪ್ರಕರಣದಲ್ಲಿ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿರುವಿರಾ ?

ಉತ್ತರ :

**ಪ್ರಶ್ನೆ 2** : ಫ್ರಾಸಾ-1- ಹೆಚ್.ಎಸ್.ವಿಶಾಲಾಕ್ಷಿ ಇವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿ ಹಾಗೂ ತಾನು ಪರಿಚಯಸ್ಥರಾಗಿದ್ದು, ಆರೋಪಿ ತನ್ನ ದರ್ದು ನಿಮಿತ್ತ ಅಂದರೆ ಗೃಹಕೃತ್ಯದ ಉದ್ದೇಶಕ್ಕಾಗಿ ತನ್ನನ್ನು 2024ನೇ ಆಗಸ್ಟ್ ಮಾಹೆ ಮೊದಲನೆಯ ವಾರದಲ್ಲಿ ಭೇಟಿ ಮಾಡಿ ರೂ.6,00,000/- ಗಳನ್ನು ಸಾಲವಾಗಿ ಕೇಳಲಾಗಿ ತಾನು ಆರೋಪಿಗೆ ದಿನಾಂಕಃ 06.08.2024 ರಂದು ರೂ.6,00,000/- ಗಳನ್ನು ಸಾಲವಾಗಿ ನೀಡಿರುವುದಾಗಿ ಸಾಕ್ಷ್ಯನುಡಿಯುತ್ತಾರೆ. ಇದಕ್ಕೇನು ಹೇಳುವಿರಿ?

ಉತ್ತರ :

**ಪ್ರಶ್ನೆ 3** : ಫ್ರಾಸಾ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಸದರಿ ಹಣವನ್ನು ತೀರುವಳಿ ಮಾಡುವ ಖಾತ್ರಿಗಾಗಿ ಆರೋಪಿ ತಾನು ಖಾತೆ ಹೊಂದಿರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಚನ್ನರಾಯಪಟ್ಟಣ ಶಾಖೆಗೆ ಸೇರಿದ ಚೆಕ್ ನಂ.011614 ನ್ನು ಮುಂಗಡ ದಿಃ 06.02.2025 ಎಂದು ನಮೂದಿಸಿ ತನಗೆ ನೀಡಿದ್ದು, ಸದರಿ ದಿನದಂದು ತಾನು ಹಣ ಪಡೆಯುವ ಸಲುವಾಗಿ ತಾನು ಖಾತೆ ಹೊಂದಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಶ್ರವಣಬೆಳಗೊಳ ಶಾಖೆಗೆ ಚೆಕ್ಕನ್ನು ಹಾಜರುಪಡಿಸಲಾಗಿ ಸದರಿ ಬ್ಯಾಂಕಿನವರು 'Funds Insufficient' ಎಂಬ ಹಿಂಬರಹದೊಂದಿಗೆ ದಿಃ 07.02.2025 ರಂದು ಚೆಕ್ಕನ್ನು ವಾಪಸ್ ನೀಡಿರುವುದಾಗಿ ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೇನು ಹೇಳುವಿರಿ?

ಉತ್ತರ :

**ಪ್ರಶ್ನೆ 4** : ಫಿರ್ಯಾದಿ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ತಾನು ತಮ್ಮ ವಕೀಲರ ಮೂಲಕ ನೋಂದಾಯಿತ ಅಂಚೆ ಮೂಲಕ ದಿಃ 11.02.2025 ರಂದು ನೋಟೀಸ್ ನೀಡಿದ್ದು, ಸದರಿ ನೋಟೀಸ್ ಡೋರ್ ಲಾಕ್ಡ್ ಮತ್ತು ಈ ವಿಳಾಸದಾರರು ಊರಿನಲ್ಲಿ ಇರುವುದಿಲ್ಲವೆಂಬ ಸುಳ್ಳು ಷರಾದೊಂದಿಗೆ ದಿನಾಂಕಃ 18.02.2025 ರಂದು ವಾಪಸ್ಸಾಗಿದ್ದು, ಆರೋಪಿಗೆ ಈ ಎಲ್ಲಾ ಮಾಹಿತಿ ತಿಳಿದಿದ್ದರೂ ಯಾವುದೇ ಜವಾಬನ್ನು ನೀಡದೆ, ಸಾಲದ ಹಣವನ್ನು ವಾಪಸ್ಸು ಮಾಡಿರುವುದಿಲ್ಲವಾಗಿ ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೇನು ಹೇಳುವಿರಿ?

ಉತ್ತರ :

**ಪ್ರಶ್ನೆ 5** : ಫಿರ್ಯಾದಿ-1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಆರೋಪಿ ನೀಡಿರುವ ಚೆಕ್, ಬ್ಯಾಂಕ್ ಹಿಂಬರಹ, ನೋಂದಾಯಿತ ಅಂಚೆ ರಶೀದಿ, ವಕೀಲರ ತಿಳುವಳಿಕೆ ಪತ್ರದ ಕಛೇರಿ ಪ್ರತಿ ಮತ್ತು ಜಾರಿಯಾಗದೇ ವಾಪಸ್ಸು ಬಂದ ತಿಳುವಳಿಕೆ ಪತ್ರ ಮತ್ತು ಅಂಚೆ ಲಕೋಟೆಯನ್ನು ನಿಪಿ-1 ರಿಂದ 5(ಎ) ನಂತೆ ಗುರುತಿಸಿರುವುದಾಗಿ ಸಾಕ್ಷ್ಯ ನುಡಿಯುತ್ತಾರೆ. ಇದಕ್ಕೇನು ಹೇಳುವಿರಿ?

ಉತ್ತರ :

**ಪ್ರಶ್ನೆ 6** : ನಿಮಗೆ ಇನ್ನೇನಾದರೂ ಹೇಳುವುದು ಇದೆಯಾ?

ಉತ್ತರ :

**ಪ್ರಶ್ನೆ 7** : ನೀವು ನಿಮ್ಮ ಪರವಾಗಿ ಯಾವುದಾದರೂ ದಾಖಲೆಯನ್ನು ಹಾಜರು ಮಾಡುವಿರಾ?

ಉತ್ತರ :

**ಪ್ರಶ್ನೆ 8** : ನಿಮ್ಮ ಪರವಾಗಿ ಸಾಕ್ಷಿ ಮಾಡಿಸುವಿರಾ ?

ಉತ್ತರ :

**ದಿನಾಂಕ 05 ನೇ ಆಗಸ್ಟ್ 2026**

ಆರೋಪಿ ಹೇಳಿಕೆಯನ್ನು ಮುಕ್ತ ನ್ಯಾಯಾಲಯದಲ್ಲಿ ತಯಾರಿಸಿ ಆತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ನಂತರ ಆತನ ಸಹಿ ಪಡೆಯಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಓ. ಹೇ. ಕೇ. ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ., ಚನ್ನರಾಯಪಟ್ಟಣ.